(SRI D. DEVARAJ URS)

to sell bottled Toddy to the consumers. The Excise Commissioner has published Notification in the *Mysore Gazette* dated 8th April 1972 indicating the shops, groups of shops, Taluks and Districts, and the date, time and place where the auctions would be held, and the procedure for conducting the auctions. Before commencement of the auction the Deputy Commissioner will cause the notification to be read out and explained in Kannada. Thereafter a list of intending tenderers will be prepared and bids in respect of each shop or group of shops will be invited and the highest bid accepted after obtaining the signature of the bidder in token of his offer.

The highest bid will be accepted provisionally by the Deputy Commissioner subject to confirmation by Government.

The Deputy Commissioner can also reject any bid on the ground that it is too low or for any other reason to be recorded by him.

Calling Attention to a matter of urgent Public Importance: *re*: Death of Smt. Venkatalakshamma in V. V. Hospital

ಶ್ರೀ ಕೆ. ಯಂಕಟಪ್ಪ (ಶಿಕಾರಿಪುರ).—ಜರೂರಾದ ಸಾರ್ವಜನಿಕ ಪ್ರಾಮುಖ್ಯತೆಯ ವಿಚಾರ ಪೊಂದನ್ನು ಎಂದರೆ, ಶ್ರೀಮತಿ ವೆಂಕಟಲಕ್ಷಮ್ಮನವರು ವಾಣಿವಿಲಾಸ ಆಸ್ಪತ್ರೆಯಲ್ಲಿ ನಿಧನರಾದ ವಿಚಾರಪೊಂದನ್ನು ಆರೋಗ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ.

SRI H. SIDDAVEERAPPA (Minister for Health).—

The patient named Smt. Venkatalakshamma aged 27 years was admitted to Vani Vilas Hospital on 17th June 1972 at 7-40 P.M. for delivery.

It is reported by the doctors who attended on her that at the time of her admission she had leaking membranes without uterine contraction. She was not feeling the foetal movements. She informed the doctor on duty that she had come to the hospital about 20 days back. Though she was advised admission that day she had refused being admitted to the hospital. Evidently she was treated outside the hospital. When she came to the Vani Vilas Hospital on 17th June 1972 seeking admission she was not accompanied by any of her relatives. A Midwife from out-side is reported to have accompanied her.

Necessary treatment was given on 17th June 1972 and she was on observation. The next day *i.e.* on 18th June 1972 the patient was showing signs of improvement but the uterus was still not acting. She was regularly attended to by the doctors on duty and treatment was continued under the superivison of Dr. P. V. Hegde Associate Professor of Obstetrics and Gynaecology of the Bangalore Medical College.

On the 19th June 1972 the patient's uterus started acting but later it was found to be " Obstructed labour due to cervical Dystocia, Intra Uterine sepsis and with threatened rupture of uterus". Her condition started deteriorating and surgery had to be undertaken and was undertaken as a life-saving measure. Before taking her for surgical operation her mother who was present was hesitant to give her consent for the operation. The Associate Professor on duty took the responsibility and proceeded with the operation as it was found absolutely necessary to save her life if possible. The operation lasted for half an hour and the general condition soon after was satisfactory. All necessary post-operative care was bestowed on the patient.

On the 20th June 1972 her general condition continued to be the same with occasional fluctuation of blood pressure. Necessary blood transfusion was given when she was looking pale. In fact the doctors paid the cost of the blood that was given to the patient during the operation. On the after noon of 20th June 1972 her temperature started rising and the patient became toxic and the same night her condition deteriorated due to complete renal shut down as a result of severe septicaemia and she succumbed to the same on the morning of 21st June 1972.

This is a case obviously badly handled outside the hospital though in-patient care was advised by the Vani Vilas Hospital 20 days before admission and the patient had declined the treatment offered by the Vani Vilas Hospital. The patient was brought to the Hospital too late and with the best of medical care her life unfortunately could not be saved.

ಶ್ರೀ ಕೆ. ಯಂಕಟಪ್ಪ.—ಸ್ವಾಮಿ, ಮಾನ್ಯ ಮಂತ್ರಿಗಳು ತಮ್ಮ ಒಂದು ಸ್ಟೇಟ್‌ಮೆಂಟ್‌ನಲ್ಲಿ ದಿನಾಂಕ 17—6—1972 ರಲ್ಲಿ 7 ಗಂಟೆ 40 ನಿಮಿಷಕ್ಕೆ ಆಸ್ಪತ್ರೆಗೆ ಸೇರಿದ್ದಾರೆ ಎಂದು ಹೇಳುತ್ತಾ ಇದ್ದಾರೆ. ನಮಗೆ ತಿಳಿದಿರುವ ಪ್ರಕಾರ ಆ ಹೆಣ್ಣುಮಗಳು ಅಬ್ಸರ್ವೇಷನ್‌ಗೆ 18ನೇ ತಾರೀಖು ಅಡ್ಮಿಟ್ ಆಗಿ 19ನೇ ತಾರೀಖು ಆಪರೇಷನ್ ಆಗಿದೆ ಎಂದು ತಿಳಿದುಬಂದಿದೆ. ಆದರೆ ಅವರ ಮನೆಯಲ್ಲಿರತಕ್ಕಂಥ ತಾಯಿ ಬಂದಿದ್ದರೂ ಸಹ ಡಾಕ್ಟರ್‌ರವರು ಅವರ ಕನ್‌ಸೆಂಟ್ ತೆಗೆದುಕೊಳ್ಳದೆ ಮತ್ತು ಅವರ ಯಜಮಾನರ ಒಂದು ಕನ್‌ಸೆಂಟ್ ಕೂಡ ತೆಗೆದುಕೊಳ್ಳದೆ ಆಪರೇಷನ್‌ಗೆ ತೆಗೆದುಕೊಂಡಿದ್ದಾರೆ. ಆಪರೇಷನ್‌ಗೆ ತೆಗೆದುಕೊಳ್ಳುವುದಕ್ಕೆ ಯಾವುದಾದರೂ ಒಂದು ಕಾರಣವನ್ನು ಬರೆದುಕೊಡತಕ್ಕಂಥಾದ್ದು ಡಾಕ್ಟರ್‌ರವರ ಹವ್ಯಾಸವಾಗಿದೆ. ಈ ಮೆಡಿಕಲ್‌ನಲ್ಲಿ ಇರತಕ್ಕಂಥ ಪ್ರಾಬ್ಲಮ್ಸ್ ಅದು ಯಾರಿಗೂ ತಿಳಿಯುವುದಿಲ್ಲ. ಆರೀತಿ ರಿಪೋರ್ಟ್ಸ್ ಅವರು ಬರೆದುಕೊಡುತ್ತಾರೆ. ಇಂತಹ ಪ್ರಕರಣಗಳು ವಾಣಿವಿಲಾಸ ಆಸ್ಪತ್ರೆಯಲ್ಲಿ ಸಾಕಷ್ಟು ಆಗಿವೆ. ಅವರು ಈ ಖಾಯಿಲೆ ಯೂಟ್ರಸ್ ಎಂದು ಒಂದು ಕಾರಣ ಕೊಟ್ಟು, ಅದು ಅನಿವಾರ್ಯವಾಗಿ ಇತ್ತು, ಈ ಆಪರೇಷನ್ ಕನ್‌ಸೆಂಟ್ ತೆಗೆದುಕೊಳ್ಳದೇ ಇದ್ದರೂ ಆಪರೇಷನ್ ಮಾಡಬೇಕಾಗಿ ಬಂತು ಎಂದು ಹೇಳಿದ್ದಾರೆ. ಕನ್‌ಸೆಂಟ್ ತೆಗೆದುಕೊಳ್ಳದೆ ಇದ್ದರೂ ಕೂಡ ಆಪರೇಷನ್ ಮಾಡಿದ್ದಾರೆ. ಅವರು ಕನ್‌ಸೆಂಟ್ ಏತಕ್ಕೆ ತೆಗೆದುಕೊಳ್ಳಲಿಲ್ಲ? ಅಲ್ಲದೆ ಈ ಆಸ್ಪತ್ರೆಯಲ್ಲಿ ಡಾ. ಹೆಗ್ಗಡೆ ಏನು ಇವ್ವಾರೋ ಅವರ ಕನ್‌ಸೆಂಟ್ ತೆಗೆದುಕೊಳ್ಳದೆ ಅಲ್ಲಿರುವ ಸ್ಟಾಫ್ ನರ್ಸ್ ಇನ್‌ಜಕ್ಷ್ ಮಾಡಿದ್ದಾಳೆ. ಡಾಕ್ಟರ್‌ರವರ ಪರ್ಮಿಷನ್ ತೆಗೆದುಕೊಂಡಿಲ್ಲ. ಇಂಜಕ್ಷ್ ಮಾಡಿದ 10 ನಿಮಿಷದಲ್ಲೇ ಹೆಣ್ಣುಮಗಳು ಸತ್ತಿದ್ದಾಳೆ. ಇದು ತಮ್ಮ ಗಮನಕ್ಕೆ ಬಂದಿದೆಯೇ?

† ಶ್ರೀ ಹೆಚ್. ಸಿದ್ದವೀರಪ್ಪ.—ನನ್ನ ಹತ್ತಿರ ಇರುವ ವರದಿ ಪ್ರಕಾರ ಇಲ್ಲಿರತಕ್ಕ ರಿಕಾರ್ಡ್ಸ್ ಪ್ರಕಾರ 17ನೇ ತಾರೀಖು ಆ ಹೆಣ್ಣುಮಗಳು ಆಸ್ಪತ್ರೆಗೆ ಸೇರಿದ್ದಾಳೆ. ಮಾನ್ಯ ಸದಸ್ಯರು ಹೇಳುತ್ತಾರೆ ಏತಕ್ಕೋಸ್ಕರ ಅವರ ಮನೆಯವರ ಒಪ್ಪಿಗೆ ತೆಗೆದುಕೊಳ್ಳಲಿಲ್ಲ ಈ ಆಪರೇಷನ್ ಮಾಡುವುದಕ್ಕೆ ಎಂದು ಆಪರೇಷನ್ ಮಾಡಬೇಕಾದರೆ ಡಾಕ್ಟರ್ ಏನಾದರೂ ಬೋನಾಫೈಡಿ ಇನ್‌ಜೆನ್‌ಷನ್‌ನಿಂದ

(ಶ್ರೀ ಹೆಚ್. ಸಿದ್ದವೀರಪ್ಪ)

ಆಪರೇಷನ್ ಮಾಡಬೇಕೇ ಅಥವಾ ಮನುಷ್ಯ ಉಳಿಯುವುದನ್ನು ನೋಡಬೇಕೇ ; ಏನು ಕಾರಣದಿಂದ ಆಪರೇಷನ್ ಮಾಡಿದರು ಎನ್ನುವುದನ್ನು ನೋಡಬೇಕು. ಅನೇಕ ಸಾರಿ ಅನಿವಾರ್ಯವಾಗಿ ಕನ್‌ಸೆಂಟ್ ತೆಗೆದುಕೊಳ್ಳದೇ ಇದ್ದರೂ ಕೂಡ ಆಪರೇಷನ್ ಮಾಡಬೇಕಾಗುತ್ತದೆ. ಆ ಸಮಯದಲ್ಲಿ ಅದು ಯಾರು ಡಾಕ್ಟರ್ ಇರುತ್ತಾರೋ ಆ ಡಾಕ್ಟರ್‌ರವರ ಜವಾಬ್ದಾರಿಯಾಗಿರುತ್ತದೆ. ರೋಗಿಯನ್ನು ಬದುಕಿಸಲಿಕ್ಕೆ ಅವರಿಗೆ ಬೇರೆ ದಾರಿಯೇ ಇಲ್ಲ ಎಂದು ಕಂಡಾಗ ಆಪರೇಷನ್ ಮಾಡಬೇಕಾದ್ದು ಅವಶ್ಯಕ ಎಂದು ಅನಿಸುತ್ತದೆ.

ಈ ಕೇಸಿನಲ್ಲಿ ಏನಾಗಿತ್ತು ಎಂದರೆ ಆಪರೇಷನ್ ಮಾಡುವುದು ಇನ್ನೊಂದು ಕಾಲುಗಂಟೆ ತಡವಾಗಿದ್ದರೆ ಗರ್ಭಕೋಶ ಒಡೆದು ತಕ್ಷಣವೇ ಆ ರೋಗಿಗೆ ಪ್ರಾಣ ಹೋಗತಕ್ಕ ಸಂದರ್ಭವಿತ್ತು ಎಂದು ಡಾಕ್ಟರಿಗೆ ಗೊತ್ತಾದ ಮೇಲೆ ಆಕೆಯ ಪ್ರಾಣವನ್ನು ಉಳಿಸಬೇಕು ಎನ್ನುವ ಉದ್ದೇಶದಿಂದ ಆಪರೇಷನ್ ಮಾಡಿದರು. ಆಪರೇಷನ್ ಆದ 24 ಗಂಟೆ ಒಳಗೆ ಆಪರೇಷನ್ ಮಾಡಿರುವುದರಲ್ಲಿ ತಪ್ಪಾಗಿದ್ದರೆ ಸಾಯಬೇಕಾಗಿತ್ತು, ಷಾಕ್ ಆಗಿದ್ದರೆ ಆಪರೇಷನ್ ಆದ 24 ಗಂಟೆಗಳಲ್ಲಿ ಸಾಯಬೇಕಿತ್ತು. ಆದರೆ ಆಪರೇಷನ್ ಆದ 30 ಗಂಟೆಗಳಾದಮೇಲೆ ಪೇಷೆಂಟ್ ಸತ್ತುಹೋಗಿರುವುದರಿಂದ, ಸಾಯಲಿಕ್ಕೆ ಆಪರೇಷನ್ ಕಾರಣವಲ್ಲ ಎನ್ನತಕ್ಕದ್ದು ಒಂದು ವಿಷಯ. ಪೇಷೆಂಟಿನ ಪ್ರಾಣವನ್ನು ಉಳಿಸುವುದಕ್ಕಾಗಿ ಆಪರೇಷನ್ ಮಾಡಬೇಕಾದ ಸಂದರ್ಭ ಬಂದುದರಿಂದ ಅವರ ಮನೆಯವರ ಪರ್ಮಿಷನ್ ತೆಗೆದುಕೊಳ್ಳಲಿಲ್ಲವೇ ಹೊರತು ಬೇರೆ ಇನ್ನೇನೂ ಇಲ್ಲ.

ನರ್ಸ್ ಇಂಜೆಕ್ಷನ್ ಕೊಟ್ಟರು ಎಂದು ಹೇಳುತ್ತಾರೆ. ನನ್ನ ಮುಂದೆ ಇರತಕ್ಕ ವರದಿಯಲ್ಲಿ ಅಲ್ಲಿದ್ದ ಇನ್ನೊಬ್ಬ ಡಾಕ್ಟರ್ ಸುಮಿತ್ರ ಎನ್ನುವವರು ಎಂ. ಡಿ. ಆಗಿದ್ದಾರೆ. ಅವರು ಹೈಲಿ ಕ್ವಾಲಿಫೈಡ್ ಡಾಕ್ಟರ್. ಅವರು ಪೇಷೆಂಟನ್ನು ನೋಡಿಕೊಂಡಿದ್ದಾರೆ. ಆದುದರಿಂದ ಈ ಪೇಷೆಂಟ್ ತೀರಿಕೊಂಡಿರುವುದಕ್ಕೆ ಅವರ ದುರದೃಷ್ಟ ಕಾರಣವೇ ಹೊರತು ಡಾಕ್ಟರು ಕಾರಣರಲ್ಲ ಎನ್ನುವುದು ನನಗೆ ಬಂದಿರತಕ್ಕ ವರದಿಯಿಂದ ಹೊರಪಟ್ಟಿದೆ.

ಶ್ರೀ ವಾಟಾಳ್ ನಾಗರಾಜ್.—ಆಪರೇಷನ್ ಯಶಸ್ವಿಯಾಯಿತು, ಪೇಷೆಂಟ್ ಸತ್ತು ಹೋದ.

ಶ್ರೀ ಎಚ್. ಸಿದ್ದವೀರಪ್ಪ.—ಆಪರೇಷನ್ ಯಶಸ್ವಿಯಾಯಿತು, ಪೇಷೆಂಟ್ ಬದುಕಲಿಲ್ಲ.

Sri C. M. ARUMUGAM.—Was there any complaint from the relatives of the deceased ?

Sri H. SIDDAVEERAPPA.—No, Sir.

ಶ್ರೀ ಕೆ. ಪ್ರಭಾಕರ್.—ವೈದ್ಯಕೀಯ ಸಹಾಯ ಕೊಟ್ಟು ಕಾಯಿಲೆಯವರು ಸತ್ತು ಹೋಗಿರುವ ಸಂದರ್ಭಗಳು ಈ ನಡೆಯಲ್ಲಿ ಬರುತ್ತಿರುವುದು ಇದೇ ಮೊದಲಲ್ಲ. ಹತ್ತಾರು ಸಲ ಇಂಥದ್ದು ಬಂದಿದೆ. ನರ್ಸ್ ಏನಾದರೂ ಇಂಜೆಕ್ಷನ್ ಕೊಟ್ಟಿದ್ದಾಳೆ ಎನ್ನುವುದು ನಿಜವಾದರೆ, ಅದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದರೆ ಆ ನರ್ಸ್ ಬದುಕುವ ಹಾಗೆಯೇ ಇಲ್ಲ ಎನ್ನುವ ನಂಬಿಕೆ ನಮಗಿದೆ. ಆದರೆ ಮಾನ್ಯ ಸದಸ್ಯರ ಶಂಕೆ ಏನಿದೆ ಎಂದರೆ ನರ್ಸ್ ಇಂಜೆಕ್ಷನ್ ಕೊಟ್ಟು, ಪೇಷೆಂಟ್ ಸತ್ತು ಹೋಗಿ, ಆ ವಿಚಾರ ಮೇಲಿನವರಿಗೆ ತಿಳಿದರೆ ತನಗೆ ಏನು ತೊಂದರೆಯಾಗುತ್ತದೆಯೋ ಎಂದು, ತನ್ನ ತಪ್ಪನ್ನು ಒಪ್ಪಿಕೊಂಡು ನನ್ನ ಹೆಸರನ್ನು ಇದರಲ್ಲಿ ತರಬೇಡಿ ಎಂದು ಹೇಳಿ ದೊಡ್ಡ ಡಾಕ್ಟರುಗಳ ಮೊರೆ ಹೊಕ್ಕಿರಬಹುದು, ಆದ್ದರಿಂದ ಅವರು ಆ ವಿಚಾರವನ್ನು ಕೈಬಿಟ್ಟಿರಬಹುದು ಎಂಬುದೇ ಆಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಏನಾದರೂ ಆಗಿದೆಯೇ ಎಂದು ವಿಚಾರ ಮಾಡೋಣ. ಮುಖ್ಯವಾಗಿ ಇಂಥ ದುರದೃಷ್ಟಕರವಾದ ಕೇಸುಗಳು ಏಕೆ ಬರುತ್ತವೆ ಎಂದರೆ ಎಲ್ಲಾ ಪೂರೈಸಿಕೊನೇ ಘಳಿಗೆಯಲ್ಲಿ ತರುತ್ತಾರೆ. In this unfortunate case, when the patient had come 20 days earlier, perhaps, if she had heeded to the advice of the Doctor, there would not have been any difficulty. It was a case of bad handling. Such cases come at a very late stage sometimes.

ಶ್ರೀ ಕೆ. ಯಂಕಟಪ್ಪ.—ಮಾನ್ಯ ಮಂತ್ರಿಗಳು ಹೇಳಿದಂತೆ ಅದು ಬ್ಯಾಡ್ ಕೇಸಲ್ಲ. ಹೊರಗೆ ಎಲ್ಲಾ ಮುಗಿದಮೇಲೆ ಆಸ್ಪತ್ರೆಗೆ ತರುತ್ತಾರೆ, ಆದರಿಂದ ಆರೋಗ್ಯ ಇಲಾಖೆಗೆ ಕೆಟ್ಟ ಹೆಸರು ಬರುತ್ತದೆ ಎಂದು ಹೇಳಿದರು. ಇಲಾಖೆಗೆ ಕೆಟ್ಟ ಹೆಸರು ಬರುತ್ತದೆ ಎಂದಲ್ಲ. 20 ದಿನಗಳ ಮೊದಲು

ಪೇಷೆಂಟ್ ಬಂದಿದ್ದಾಗ ಆಸ್ಪತ್ರೆಗೆ ಸೇರಲು ಸಲಹೆ ಮಾಡಲಾಯಿತು ಎಂದು ಹೇಳಿರುವುದು ಸರಿಯಲ್ಲ, ಅಡ್ಮಿಷನ್ ಮಾಡುವುದಿರಲಿ, ಒಳಗಡೆಗೂ ಕೂಡ ಸೇರಿಸಲಿಲ್ಲ. ಈ ಹೊತ್ತು ರಿಪೋರ್ಟಿನಲ್ಲಿ ಹಾಗೆ ಬರೆದಿರಬಹುದು. ಹಿಂದುಳಿದ ಜನಗಳು, ರೈತರು, ಬಡವರು ಆಸ್ಪತ್ರೆಗಳಿಗೆ ಹೋದರೆ ಅಲ್ಲಿ ನೋಡುವವರು ಯಾರೂ ಇರುವುದಿಲ್ಲ. ನಾಲ್ಕನೇ ಕ್ಲಾಸ್ ಎಂದರೆ ಸರ್ವೆಂಟ್ಸ್ ಅಲ್ಲಿರುವವರು ಸಭಾಪತಿಯವರಿಗಿಂತ ಹೆಚ್ಚಿನ ರೀತಿಯಲ್ಲಿ ಮೆರೆಯುತ್ತಾರೆ. ಅಲ್ಲಿರುವ ಡಾಕ್ಟರುಗಳು ಏನು ಮಾಡುತ್ತಾರೆ ಎಂದು ನಾನು ಕೇಳುತ್ತೇನೆ. ಈ ತರಹ ಇರುವುದರಿಂದ ಅಲ್ಲಿರುವ ಡಾಕ್ಟರು ಮುಂತಾದವರನ್ನು ಬೇರೆಡೆಗೆ ವರ್ಗ ಮಾಡಿನಬೇಕು ಇಲ್ಲದೆ ಹೋದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ಆ ರೀತಿ ಏನಾದರೂ ಅನ್ಯಾಯವಾಗಿದ್ದರೆ ಅದನ್ನು ವಿಚಾರ ಮಾಡುತ್ತೇನೆ. ಅಲ್ಲದೆ ಸರ್ಕಾರದಿಂದ ಒಂದು ಆರ್ಡರ್ ಹೊರಡಿಸಿ, ಆಸ್ಪತ್ರೆಯ ಒಳಗೆ ಯಾರಾದರೂ ಸತ್ತರೆ ಯಾವ ಕಾರಣದಿಂದ ಸತ್ತರು, ಏಕಕ್ಕೋಸ್ಕರ ಅವರು ಸತ್ತರು ಎನ್ನುವ ರಿಪೋರ್ಟನ್ನು ಸರ್ಕಾರಕ್ಕೆ ಕಳುಹಿಸಬೇಕೆಂದು ತಿಳಿಸುತ್ತೇನೆ. ವಾಣಿವಿಲಾಸ ಆಸ್ಪತ್ರೆ ಮಾತ್ರವಲ್ಲ, ಎಲ್ಲ ಆಸ್ಪತ್ರೆಗಳಿಂದಲೂ ಈ ರೀತಿಯ ರಿಪೋರ್ಟನ್ನು ಸರ್ಕಾರಕ್ಕೆ ಕಳುಹಿಸಬೇಕೆಂದು ತಿಳಿಸುತ್ತೇನೆ. ಅಂಥ ರಿಪೋರ್ಟ್ ಬಂದಾಗ ನಾನು ನೋಡುತ್ತೇನೆ. ಬೇರೆ ದೇಶಗಳಲ್ಲಿ ಇಂಥ ರಿಪೋರ್ಟನ್ನು ಕಳುಹಿಸುವ ಪದ್ಧತಿ ಇದೆ. ಆ ರೀತಿಯ ಹುಕುಂ ಹೊರಡಿಸುತ್ತೇನೆ.

ಶ್ರೀ ಕೆ. ಯಂಕಟಪ್ಪ.—ರಿಪೋರ್ಟ್ ತರಿಸಿಕೊಂಡು ವಿಚಾರ ಮಾಡುವುದಾಗಿ ಹೇಳಿದ್ದು ಸರಿ. ಆದರೆ ಅಡ್ಮಿಟ್ ಮಾಡಿಕೊಳ್ಳುವಾಗ ಸರಿಯಾದ ರೀತಿಯಿಂದ ಜನರನ್ನು ನೋಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಚ್. ಸಿದ್ಧವೀರಪ್ಪ.—ಮಾಡುತ್ತೇನೆ.

Notice of an Adjournment Motion *re*: alleged supply of milk containing worms by the Bangalore Dairy

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ) —ನಾನು ತಮಗೆ ಒಂದು ನೋಟೀಸ್ ಕೊಟ್ಟಿರುತ್ತೇನೆ. ಇದು ಬಹಳ ಗುರುತರವಾದ ವಿಚಾರ. ಶೇಷಾದ್ರಿಪುರದಲ್ಲಿ ಈ ಹೊತ್ತು ಬೆಳಿಗ್ಗೆ ಬಹಳ ಜನ ಸೇರಿ, ಕಾರ್ಪೊರೇಟರ್ ಸೇರಿ ನೋಡಿರತಕ್ಕ ವಿಷಯ. ಬೆಂಗಳೂರು ಡೈರಿಯವರು ಹಾಲು ಸಪ್ಲೈ ಮಾಡುತ್ತಿದ್ದ ಹಾಲಿನ ಸೀಸೆಯಲ್ಲಿ ಕೆಟ್ಟ ಕ್ರಿಮಿಗಳಿದ್ದುವು. ಪೋಲೀಸ್ ಸ್ಟೇಷನ್‌ನಲ್ಲಿ ಅನೇಕ ಜನ ಸೇರಿದ್ದರು. ಕಾರ್ಪೊರೇಟರ್ ಪಿ. ರಾಮದೇವ್ ಅವರೂ ಅಲ್ಲಿದ್ದರು. ಆ ಹಾಲನ್ನು ಇಲ್ಲಿ ತಂದಿದ್ದೇನೆ. ಅದರಲ್ಲಿ ಸಹಸ್ರಾರು ಸಣ್ಣ ಸಣ್ಣ ಹುಳುಗಳು ಇವೆ. ಇದನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರ ನೋಟೀಸ್ ಬಂದಿದೆ, ಅದನ್ನು ನಾನು ನೋಡುತ್ತೇನೆ. ಆದರೆ ಆ ಇಲಾಖೆಗೆ ಸಂಬಂಧಪಟ್ಟ ಬೇಡಿಕೆ ಚರ್ಚೆಗೆ ಬರುವಾಗ ತಾವು ಅದರ ಬಗ್ಗೆ ಮಾತನಾಡಬಹುದು. ತಮ್ಮ ಸೂಚನೆಯನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ನಾನು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುವುದು ಏನೆಂದರೆ ಬೆಂಗಳೂರು ಡೈರಿ ಹಾಲು ಏನಿದೆ ಅದನ್ನು ಈ ಗ್ಲಾಸಿಗೆ ಸುರಿದು ಕಳುಹಿಸುತ್ತೇನೆ, ಅದು ಹೇಗಿದೆ ಎಂದು ತಾವೇ ಖುದ್ದಾಗಿ ನೋಡಬಹುದು. (ಒಂದು ಗ್ಲಾಸಿನಲ್ಲಿ ಸ್ವಲ್ಪ ಹಾಲನ್ನು ಹಾಕಿ ಅಧ್ಯಕ್ಷರ ಕಡೆಗೆ ಕಳುಹಿಸಿಕೊಟ್ಟರು) ಇಂಥ ಹಾಲನ್ನು ಕುಡಿದು ಬೆಂಗಳೂರಿನ ಜನ ಏನಾಗಬೇಕು ಎನ್ನುವುದನ್ನು ತಾವು ಪರೀಕ್ಷೆ ಮಾಡಿ ನೋಡಿ. ಡಿಪಾರ್ಟ್‌ಮೆಂಟ್‌ನವರು ಹಂಚಿಕೆದಾರರಿಂದ ಸೀಜ್ ಮಾಡಿಕೊಂಡು ಹೋಗಿದ್ದಾರೆ. ಪೋಲೀಸ್ ಸ್ಟೇಷನ್‌ನಲ್ಲಿ ರಿಕಾರ್ಡ್ ಆಗಿದೆ. ಗೌರವಯುತವಾದ ಕಾರ್ಪೊರೇಟರ್ ನೋಡಿದ್ದಾರೆ, ಎಲ್ಲ ಜನರೂ ನೋಡಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇದೇ ರೀತಿ ಹಂಚುವುದಾದರೆ.....

ಶ್ರೀ ಎಸ್. ಹಮೀದ್ ಷಾ.—ಮಾನ್ಯ ಸದಸ್ಯರು ತಂದಿರುವ ಹಾಲಿನ ಬಗ್ಗೆಯೇ ನಾವು ಸಂಶಯ ಪಡುತ್ತೇವೆ.